ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೇ, ಎತ್ತರದ ಭಾಗಗಳಿಗೆ ನೀರಿನ ತೊಂದರೆಯುಂಟಾಗಿರುವುದು ಕಂಡುಬಂದಿರುವುದರಿಂದ ಅಲ್ಲಿ ರಿಸರ್ವ್‌ವಾಯರ್ ಮಾಡುವುದಕ್ಕೆ ಎಸ್ಟಿಮೇಟ್ ಮಾಡಿರುತ್ತೇವೆ. ಈ ರಿಸರ್ವ್‌ವಾಯರ್ ಎಲ್ಲಿಯವರೆಗೆ ಆಗುವುದಲ್ಲವೋ ಅಲ್ಲಿಯವರೆಗೆ ಸಮರ್ಪಕವಾದ ನೀರು ಪೂರೈಕೆ ಆಗುವುದಿಲ್ಲ. ಆದ್ದರಿಂದ ಅದನ್ನು ಆದಷ್ಟು ಜಾಗ್ರತೆ ಮಾಡುವ ಪ್ರಯತ್ನ ಮಾಡುತ್ತೇವೆ.

Income to Government from Forest Produce

243 SRI L. T. THIMMAPPA HEGDE (Sagar).— Will the Minister for Rural Development and Panchayat Raj be pleased to state.—

(a) the details of the revenue receipts to the State Exchequer from the 'Forest Wealth' (distristwise details for one year may please be furnished) ;

(b) whether a portion of the revenue realised from the forest wealth was given to North Canara district for its developmental works. If so, the amount paid since 3 years ;

(c) whether there is any proposal to grant such assistance to other districts also. The method adopted by the Government for distributing of such incomes ?

SRI B. RAMAIAH. (Minister for Rural Development and Panchayat Raj).—

(a) The total amount af revenue realised to the State Exchequer during year 1977-78 is Rs. 29,91,84,927. The district-wise details are appended.

(b) Yes. The details for the last 3 years are as follows ;

1977-78	...	Rs. 500000
1978-79	...	Rs. 250000
1979-80	...	Rs. 250000

(c) As this is under consideration, the question does not arise,

STATEMENT

(*Vide* REPLY TO CLAUSE (b) OF STARRED QUESTION

No. 478 (243)]

The District-wise Revenue realised during the year 1977-78 is as follows.—

Sl. No.	*Name of the District*		*Revenue Realised*
1.	Bangalore	...	14,29,608
2.	Belgaum	...	1.33,45 207
3.	Bellary	...	3,69,002
4.	Bidar	...	4,44 404
5.	Bijapur	...	96,581
6.	Chickmagalur	...	1.38,33,193
7.	Chitradurga	...	83,715
8.	Dakshina Kannada	...	2,91,48,071
9.	Dharwar	...	41,51,908
10.	Gulbarga	...	2,43,587
11.	Hassan	...	50,09,215
12.	Kodagu	...	2,52 24,163
13.	Kolar	...	12,43,621
14.	Mandya	...	90.700
15.	Mysore	...	2,29,09,256
16.	Raichur	...	2,31,965
17.	Shimoga	...	2,34,98,439
18.	Tumkur	...	1,99,536
19.	Uttara Kannada	...	14,39,74,214
			28,55,26,385
20	Development Wing (By sale of Cocoa, Rubber, etc., and miscellaneous receipts).		1.36.58,542
		TOTAL.	29,91,84,927

ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ.— ಸ್ವಾಮಿ, ಇದರಲ್ಲಿ ''ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ'' ಯಂತೆ ಎಂಬ ಗಾದೆಯ ರೀತಿ ಮಾಡಿದ್ದೀರಿ. ಅರಣ್ಯ ಸಂಪತ್ತಿನ ಹಂಚಿಕೆಯಲ್ಲಿ ಬೇರೆ ಬೇರೆ ಜಿಲ್ಲೆಗಳನ್ನು ಪರಿಗಣನೆಗೆ ತೆಗೆದುಕೊಂಡಂತೆ ಉತ್ತರ ಕನ್ನಡ ಜಿಲ್ಲೆಯನ್ನು ತೆಗೆದುಕೊಂಡಿಲ್ಲ. ಇದಕ್ಕೆ ಕಾರಣ ವೇನೆಂದು ಕೇಳುತ್ತೇನೆ?

ಶ್ರೀ ಬಿ. ರಾಮಯ್ಯ.— ಇದು ಹಿಂದೆ ಆಗಿರತಕ್ಕಂಥ ಒಂದು ತೀರ್ಮಾನ. ಈ ವ್ಯತ್ಯಾಸ ಆಗ ದಂತೆ ಸರ್ಕಾರ ತೀವ್ರವಾಗಿ ಗಮನಿಸುತ್ತಿದೆ. ಈಗ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಲು ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡು ಪ್ರಯತ್ನ ಮಾಡುತ್ತಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಂತಿದ್ದೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.— ಈ ವಿಷಯವಾಗಿ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ತೀವ್ರ ಪರಿಶೀಲನೆಯಲ್ಲಿದೆ ಎಂದು ತಮ್ಮ ಉತ್ತರದಲ್ಲಿ ಕೊಟ್ಟಿದ್ದೀರಿ. ಅನೇಕ ವರ್ಷಗಳಿಂದ ಉತ್ತರ ಕನ್ನಡ ಜಿಲ್ಲೆಗೆ ಯಾವ ವಿಧವಾದ ಸವಲತ್ತುಗಳನ್ನು ಕೊಟ್ಟಿಲ್ಲ ಈ ಜಿಲ್ಲೆ ಅಭಿವೃದ್ಧಿಯಲ್ಲಿ ಬಹಳ ಹಿಂದುಳಿದಿರತಕ್ಕಂಥ ಪ್ರದೇಶವಾಗಿರುತ್ತದೆ. ಅರಣ್ಯದ ಕಷ್ಟ ಅರಣ್ಯದೊಳಗೆ ಇರತಕ್ಕಂಥವರಿಗೆ ತಿಳಿದಿರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಈ ಖಾತೆಯನ್ನು ಹೊಂದಿರುವುದರಿಂದ ಮತ್ತು ಅವರು ಸದನವಲ್ಲಿರುವುದರಿಂದ ಅವರು ದಯವಿಟ್ಟು ನಮಗೆ ಇರತಕ್ಕಂಥ ಕಷ್ಟಗಳನ್ನು ಪರಿಗಣನೆಗೆ ತೆಗೆದುಕೊಂಡು ಅರಣ್ಯ ಸಂಪತ್ತಿನ ಒಂದು ಅಂಶವನ್ನಾದರೂ ಬೇರೆ ಜಿಲ್ಲೆಗಳಿಗೆ ಕೊಡತಕ್ಕಂಥ ಬಗ್ಗೆ ಏನು ಒಂದು ಕ್ರಮವನ್ನು ಅನುಸರಿಸುತ್ತಾರೆ, ಅದೇ ಕ್ರಮವನ್ನು ಅನುಸರಿಸಿ ಕೊಡುವಂಥ ವ್ಯವಸ್ಥೆಯನ್ನು ಮಾಡುವ ಬಗ್ಗೆ ದಯವಿಟ್ಟು ತಿಳಿಸಂತಾರೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ರಾಮಯ್ಯ.— ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿದ್ದೇನೆ. ಹಿಂದೆ ಆಗಿರತಕ್ಕಂಥ ಅನ್ಯಾಯದ ಬಗ್ಗೆ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಸಂಪೂರ್ಣವಾದ ಗಮನಹರಿಸಿ, ತೀವ್ರವಾಗಿ ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆ ಅನುಕೂಲತೆಗಳನ್ನು ಒದಗಿಸುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಎ. ಜೆ. ಕೊಡಗಿ.— ಮಾನ್ಯ ಸಚಿವರು ಉತ್ತರ ಕೊಡುತ್ತಾ, ಹಿಂದೆ ಅನ್ಯಾಯವಾಗಿದೆ ಎಂದಿ ಹೇಳತಕ್ಕಂಥದ್ದು ಸಮಂಜಸವಾದುದಲ್ಲ ಹಿಂದಿನ ಸರ್ಕಾರ ಅರಣ್ಯ ಪ್ರದೇಶಗಳು ಬಹಳವಾಗಿ ಇರುವ ಕಡೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಂದ ಧನ ಸಹಾಯ ಮಾಡಲಾಗದ್ದರಿಂದ ವಿಶ್ವ ಬ್ಯಾಂಕಿನಿಂದ ಅರಣ್ಯ ಉತ್ಪತ್ತಿಯ ಒಂದು ಭಾಗವನ್ನು ಕೊಟ್ಟಿದೆ. ಉತ್ತರ ಕನ್ನಡ ಜಿಲ್ಲೆಯಷ್ಟೇ ಅಲ್ಲ ದಕ್ಷಿಣ ಕನ್ನಡ ಜಿಲ್ಲೆಗಳಾದ ಶಿವಮೊಗ್ಗ, ಕೊಡಗು ಜಿಲ್ಲೆಗಳೂ ಕೂಡ ಬಹಳ ವರ್ಷಗಳಿಂದ ಅರಣ್ಯ ಸಂಪತ್ತಿನ ಉತ್ಪನ್ನದಿಂದ ತಾಲ್ಲೂಕು ಅಭಿವೃದ್ಧಿ ಮಂಡಲಿಗಳೇ ಬಹಳ ಮಟ್ಟಿಗೆ ಹಣವನ್ನು ಒದಗಿಸುತ್ತಿರುತ್ತವೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಶಕ್ತಿಯುತವಾಗಿ ಸಮಂಜಸವಾಗಿ ಕಾರ್ಯನಿರ್ವಹಿಸಲು ಸಹಕಾರ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ. ರಾಮಯ್ಯ.— ಇಲ್ಲಿ ಉತ್ತರ ಕನ್ನಡ ಜಿಲ್ಲೆ ದಕ್ಷಿಣ ಕನ್ನಡ ಜಿಲ್ಲೆ ಎನ್ನುವ ಅಭಿಪ್ರಾಯ ಬರುವುದಿಲ್ಲ. ಇದು ಎಲ್ಲ ಭಾಗಗಳಿಗೂ ಅನ್ವಯಿಸುತ್ತದೆ. ಅರಣ್ಯ ಉತ್ಪತ್ತಿಯಿಂದ ಬರತಕ್ಕಂಥ ಕೆಲವು ಭಾಗವನ್ನು ಯಾವುದೇ ಹಿಂದುಳಿದ ಮಂಡಲಿಯ ಅಭಿವೃದ್ಧಿಗೆ ಕೊಡತಕ್ಕಂಥದ್ದು ವ್ಯವಸ್ಥೆ ಇರುತ್ತದೆ. ಉತ್ತರ ಕನ್ನಡ ಜಿಲ್ಲೆಯಿಂದ ಬರತಕ್ಕಂಥ ಅರಣ್ಯ ಸಂಪತ್ತಿನ ಉತ್ಪನ್ನವನ್ನು ಉತ್ತರ ಕನ್ನಡ ಜಿಲ್ಲೆಗೆ ಸೀಮಿತಗೊಳಿಸಲಿಕ್ಕೆ ಸಾಧ್ಯವಿಲ್ಲ. ಇಡೀ ಕರ್ನಾಟಕದಲ್ಲಿ ಅರಣ್ಯವಿಲ್ಲದ ಭಾಗಗಳಿಗೂ ಕೊಡಬೇಕಾಗಿರುತ್ತದೆಂದು ಈ ಮೂಲಕ ಹೇಳುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ — ಕೊನೆಪಕ್ಷ ತಾಲ್ಲೂಕು ಅಭಿವೃದ್ಧಿ ಮಂಡಲಿಯಿಂದಲಾದರೂ ಹಣವನ್ನು ಈ ವರ್ಷದಲ್ಲಿ ಕೊಡಲಿಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಕೊಡಗಿಯವರು ಹೇಳಿದ ಪ್ರಕಾರ ಉತ್ತರ ಕನ್ನಡ ಜಿಲ್ಲೆಗೆ ಕೊಡತಕ್ಕಂಥದ್ದು ಸರಿಯಲ್ಲ. ಏತಕ್ಕೆಂದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಸಂಪತ್ತಿನಿಂದ ಉತ್ಪತ್ತಿಯಾದುದನ್ನು ಉತ್ತರ ಕನ್ನಡ ಜಿಲ್ಲೆಗೆ ಕೊಡಿ ಎಂದು ಕೇಳಿದರೆ ಕೋಲಾರದಲ್ಲಿ ಚಿನ್ನದ ಉತ್ಪನ್ನದಿಂದ ಕೋಲಾರಕ್ಕೆ ಕೊಡಿ, ಬಳ್ಳಾರಿ ಜಿಲ್ಲೆಯ ಮೈನ್ಸ್‌ನಿಂದ ಬರತಕ್ಕಂಥ ಉತ್ಪನ್ನವನ್ನು ಬಳ್ಳಾರಿಗೆ ಕೊಡಿ ಎಂದು ಕೇಳಬಹುದು. ಆದ್ದರಿಂದ ರಾಜ್ಯದ ಸಂಪತ್ತು ರಾಜ್ಯಕ್ಕೆ ಸೇರಿದ್ದು. ಮಂಡ್ಯಾದಲ್ಲಿ ಕಬ್ಬು ಜಾಸ್ತಿ ಬೆಳೆಯುತ್ತಾರೆ, ಉತ್ಪನ್ನ ಜಾಸ್ತಿಯಿರುವುದರಿಂದ ಮಂಡ್ಯಾ ತಾಲ್ಲೂಕಿಗೆ ಕೊಡಿ ಎಂದು ಕೇಳಬಹುದು, ಈ ರೀತಿ ಎಲ್ಲ ಜಿಲ್ಲೆಯವರು ಕೊಡಿ ಕೊಡಿ ಎಂದು ಕೇಳುವುದು ಸರಿಯಲ್ಲ. ನಾವು ಆ ರೀತಿ ತೀರ್ಮಾನ ತೆಗೆದುಕೊಳ್ಳುವುದಾದರೆ ಬಹಳ ತೊಂದರೆಯಾಗುತ್ತದೆ. If you take a decision on that basis, it will be very difficult. This is not correct. So that question does not arise. We should also think whether we can review the earlier decision in respect of North-Kanara also.

ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ. --೧೯೭೯-೮೦ರಲ್ಲಿ ೨೫ ಲಕ್ಷ ರೂಪಾಯಿಗಳನ್ನು ಉತ್ತರ ಕನ್ನಡ ಜಿಲ್ಲೆಗೆ ಕೊಟ್ಟಿದೆ. ಅರಣ್ಯ ಸಂಪತ್ತಿನಿಂದ ಬರತಕ್ಕಂಥ ಉತ್ಪತ್ತಿಯನ್ನೆಲ್ಲ ನಮಗೆ ಹಂಚಿ ಎಂದು ನಾವು ಕೇಳುತ್ತಿಲ್ಲ. ಅರಣ್ಯಗಳು ವಿಶೇಷವಾಗಿ ಇರುವ ಕಡೆಗಳಲ್ಲಿ ರಸ್ತೆಗಳ ತೊಂದರೆ ಇರುತ್ತದೆ. ವನ್ಯಮೃಗಗಳ ತೊಂದರೆ ಇರುತ್ತದೆ. ಆ ತೊಂದರೆಯನ್ನು ಪರಿಹಾರಮಾಡಲು ಸ್ಪೆಷಲ್ ಗ್ರಾಂಟನ್ನಾದರೂ ಕೊಡಿ ಎಂದು ಕೇಳುತ್ತಿದ್ದೇವೆ. ಒಂದಕ್ಕೊಂದು ತಾರತಮ್ಯವಿಲ್ಲದ ರೀತಿಯಲ್ಲಿ ಪರಿಗಣನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಮಯ್ಯ.— ಈಗ ತಾನೇ ಅದನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ ಎಂದು ಮಾನ್ಯ ಮಂಖ್ಯಿ ಮಂತ್ರಿಗಳು ಹೇಳಿರುತ್ತಾರೆ. ರಸ್ತೆಗಳ ನಿರ್ಮಾಣ ಮತ್ತು ರಿಪೇರಿ ವಗೈರೆ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳಲು ಸರ್ಕಾರ ಪ್ರಯತ್ನ ಮಾಡುತ್ತದೆಂದು ಹೇಳುತ್ತೇನೆ.

ಶ್ರೀ. ಎಸ್. ವಿ. ನಾಯಕ್.— ಉತ್ತರ ಕನ್ನಡ ಜಿಲ್ಲೆಗೆ ವಿಶೇಷ ಸವಲತ್ತುಗಳನ್ನು ಕೊಟ್ಟದ್ದು ಅನ್ಯಾಯವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆದರೆ ಫಾರೆಸ್ಟ್ ಪ್ರಿವಿಲೇಜಸ್ ಸವಲತ್ತುಗಳನ್ನು ಕೊಡಲು ಏನು ಬಾಧೆ ಇರುತ್ತದೆ ಅದೆರಂತೆ ಉತ್ತರ ಕನ್ನಡ ಜಿಲ್ಲೆಗೆ ಕೊಡಲು ಒಪ್ಪುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ರಾಮಯ್ಯ.— ಪ್ರಿವಿಲೇಜಸ್ ಕೊಡತಕ್ಕಂಥದರ ಬಗ್ಗೆ ಸೀಮಿತವಿರಬಾರದು. ನಮ್ಮ ಪ್ರಿವಿಲೇಜ್ ನವುಗೆ ಕೊಡಿ ಎಂದು ಕೇಳುವುದಾದರೆ, ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆ ಮುಂತಾದ ನಾಲ್ಕೈದು ಜಿಲ್ಲೆಗಳವರು ಸಹಾ ಅವರ ಪ್ರಿವಿಲೇಜ್ ಬಗ್ಗೆ ಕೇಳಬಹುದು. ಆದ್ದರಿಂದ ಪರಿಸ್ಥಿತಿ ಏನು ಎನ್ನುವುದನ್ನು ಪರಿಶೀಲಿಸಿ ಸಮಗ್ರವಾಗಿ ಪರಿಶೀಲನೆ ಮಾಡಬೇಕಾಗಿರುತ್ತದೆಂದು ಹೇಳುತ್ತೇನೆ.

ಶ್ರೀ ಎಲ್. ಟಿ ತಿಮ್ಮಪ್ಪಹೆಗಡೆ.— ಫಾರೆಸ್ಟ್ ಪ್ರಿವಿಲೇಜ್ ಇದ್ದರೂ ಕೂಡ ಅರಣ್ಯ ತೊಂದರೆ ಏನು ಇದೆ ಏನ್ನುವುದನ್ನು ಪರಿಗಣನೆ ಮಾಡತಕ್ಕಂಥದ್ದು ಬಹಳ ಅಗತ್ಯವಿದೆ. ಅದನ್ನು ಮನಗಂಡು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆಂದು ಆಷ್ಟು ಹೇಳಿದರೆ ಸಾಕು ಏಕಾ ಏಕೆ ಸವಲತ್ತುಗಳನ್ನು ತೆಗೆದುಬಿಟ್ಟರೆ ಕಷ್ಟವಾಗುತ್ತದೆ. ಆದ್ದರಿಂದ ಸಹಾನುಭೂತಿ ಉತ್ತರವನ್ನು ಹೇಳಿದರೆ ಸಂತೋಷವಾಗುತ್ತದೆಂದು ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.— ಅವರ ವಿನಂತಿ ಏನು ಇರುತ್ತದೆ ಅದನ್ನು ಪರಿಶೀಲನೆ ಮಾಡ ಲಾಗುತ್ತದೆ.

Taluk Level Hospitals Upgraded into General Hospitals

422. SRI D T. MAYANNA (Huliyurdurga).—Will the Minister for Health and Family Welfare be pleased to state.—

(a) which are the taluk level hospitals that have been upgraded into general hospitals;

(b) how many years have been elapsed after the establishment of H spital at Huliyurdurga Kunigal Taluk, Tumkur District;

(c) whether Government has received any representation for the conversion of this Hospitals into a P.H.C. of Government of India type pattern (G.O.I.P);

(d) what is the procedure for conversion of these Hospitals into that of GOIP-PHCs;

(e) whether this Hospital is having all necessities for this type of conversion?